KACM030026812022

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಚಿಕ್ಕಮಗಳೂರು.</u>

**<u>ಸಿ.ಸಿ. ನಂ.1723/22</u>**

| | | |
|---|---|---|
| ಸಾಕ್ಷಿದಾರರ ಹೆಸರು : | ಗೌರಿಶ್ | ಪಿಡಬ್ಲ್ಯೂ5 |
| ತಂದೆಯ ಹೆಸರು : | ಶಿವರುದ್ರಪ್ಪ ಬಿ ಟಿ | ಸಿಡಬ್ಲ್ಯೂ - 13 |
| ವಯಸ್ಸು : | 33 ವರ್ಷ | |
| ಉದ್ಯೋಗ : | ಉಪ ವಲಯಾರಣ್ಯಾಧಿಕಾರಿ, ನಗರ ಶಾಖೆ , ಚಿಕ್ಕಮಗಳೂರು | |
| ವಾಸ : | ಚಿಕ್ಕಮಗಳೂರು | |

<u>ಪ್ರಮಾಣ ವಚನ ಭೋದಿಸಲಾದ ದಿನಾಂಕಃ 23.01.2024</u>

<u>ಮುಖ್ಯ ವಿಚಾರಣೆಃ ಸ. ಸ. ಅ ರವರಿಂದಃ-</u>

ನಾನು ದಿಃ 27.08.2021 ರಿಂದ ಇಲ್ಲಿಯವರೆಗೆ ನಗರ ಶಾಖೆ ಚಿಕ್ಕಮಗಳೂರು ವಲಯದಲ್ಲಿ ಉಪ ವಲಯಾರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾಸಾ 1 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜೀವಂತ ಮಣ್ಣು ಮುಕ್ಕ ಹಾವನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಚಾಸಾ 12 ರವರ ಸುಪರ್ದಿಗೆ ನೀಡಿದುದ , ಆ ಸಮಯಲ್ಲಿ ಚಾಸಾ 12 ರವರೊಂದಿಗೆ ನಾನು ಮತ್ತು ಚಾಸಾ 14 ರವರು ಜೊತೆಯಲ್ಲಿದ್ದೆವು. ಸದರಿ ಮಣ್ಣು ಮುಕ್ಕ ಹಾವವನ್ನು ಪಶು ವೈದ್ಯಾಧಿಕಾರಿಗಳ ಆದೇಶದಿಂದ 2 ದಿನಗಳ ಕಾಲ ಪರಿವೀಕ್ಷಣೆಯಲ್ಲಿಟ್ಟಿದ್ದು , ಸದರಿ ಹಾವು ಅರೋಗ್ಯವಾಗಿದೆ ಎಂಬುದನ್ನು ದೃಢಿಪಡಿಸಿಕೊಂಡು ದಿಃ 16.04.2022 ರಂದು ಮಾನ್ಯ ನ್ಯಾಯಾಲಯದ

KACM030026812022

ಆದೇಶದ ಮೇರೆಗೆ ಚಾಸಾ 12 ರವರ ಸಮಕ್ಷಮ ನಾನು ಮತ್ತು ಚಾಸಾ 14 ರವರು ಮತ್ತಾವರ ಅರಣ್ಯ ಮೀಸಲು ಅರಣ್ಯ ಪ್ರದೇಶಕ್ಕೆ ಹೋಗಿ ಪ್ರಕರಣಕ್ಕೆ ಸಂಬಂಧಿಸಿದ ಜೀವಂತ ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಟ್ಟಿದ್ದು ಸದರಿ ಹಾವು ಕಾಡಿಗೆ ಜೀವಂತವಾಗಿ ಹೋಗುವುದನ್ನು ಛಾಯಾಗ್ರಹಣ ಮಾಡಿ ಅದು ಕಾಡಿನಿಂದ ಮರೆಯಾದ ತಕ್ಷಣ ನಾವು ಹಿಂದಿರುಗಿರುತ್ತೇವೆ. ಸದರಿ ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವ ಸಮಯದಲ್ಲಿ ಮಹಜರು ಪ್ರಕ್ರಿಯೆಯನ್ನು ಸಂಜೆ 5 ರಿಂದ 5-30 ರ ಸಮಯದಲ್ಲಿ ಜರುಗಿಸಿರುತ್ತೇವೆ. ನಂತರ ಕಛೇರಿಗೆ ವಾಪಸ್ಸಾಗಿ ಸ್ಥಳದಲ್ಲಿ ನನ್ನ ಮೊಬೈಲಿನಿಂದ ಮಾಡಿದ್ದ ಛಾಯಾಗ್ರಹಣವನ್ನು ಕಂಪ್ಯೂಟರಿಗೆ ವರ್ಗಾಯಿಸಿಕೊಂಡು ನಂತರ ಅದನ್ನು ಸಿ ಡಿ ಗೆ ವರ್ಗಾಯಿಸಿಕೊಂಡು ಚಾಸಾ 12 ರವರಿಗೆ ಸಿ ಡಿ ಯನ್ನು ನೀಡಿರುತ್ತೇನೆ. ಸದರಿ ಛಾಯಾಗ್ರಹಣವನ್ನು ಹಾಗೂ ಅದನ್ನು ಸಿ ಡಿ ಗೆ ವರ್ಗಾಯಿಸಿದ್ದಕ್ಕೆ ಕಲಂ 65(ಬಿ) ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಹಾವನ್ನು ಬಿಟ್ಟು ಬರುವ ವಿಚಾರಕ್ಕೆ ಸಂಬಂಧಿಸಿದಂತೆ ನಾನು ನನ್ನ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವ ಸಮಯದಲ್ಲಿ ಮಾಡಿದಂತಾ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗಾಗಲೆ ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು, ಕಲಂ 65(ಬಿ) ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ನಿಪಿ 7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು, ಮಣ್ಣು ಮುಕ್ಕ ಹಾವಿನ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗಾಗಲೆ ನಿಪಿ-2

ಎಂದು ಗುರುತಿಸಲಾಗಿರುತ್ತದೆ. ಕಲಂ **65(ಬಿ)** ಪ್ರಮಾಣಪತ್ರ ನೀಡಿದ ಸಿ ಡಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗಾಗಲೆ ನಿಪಿ **-3** ಎಂದು ಗುರುತಿಸಲಾಗಿರುತ್ತದೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎ ಕೆ ಬಿ ವಕೀಲರಿಂದಃ-</u>

ದಿನ ನಾನು ಬೆಳಗ್ಗೆ **9-30** ಕ್ಕೆ ಕಛೇರಿಗೆ ಕೆಲಸಕ್ಕೆ ಹಾಜರಿರುತ್ತೇನೆ. ಪ್ರತಿದಿನ ನಾವು ಕಛೇರಿಯಿಂದ ಕೆಲಸದ ಮೇಲೆ ಹೊರ ಹೋಗುವ ಸಮಯದಲ್ಲಿ ಯಾವ ವಿಚಾರಕ್ಕೆ ಹೊರ



ಹೋಗುತ್ತಿದ್ದೇವೆ ಎಂಬ ಬಗ್ಗೆ ನಮೂದು ಮಾಡುತ್ತೇವೆ ಎಂದರೆ ಸರಿ. ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವುದಕ್ಕೆ ಹೋಗುವುದಕ್ಕೆ ಮುಂಚಿತವಾಗಿ ಕಛೇರಿಯಲ್ಲಿ ಅದರ ಬಗ್ಗೆ ನಮೂದು ಮಾಡಿ ಹೋಗಿರುತ್ತೇವೆ. ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ **12** ರವರು ನನಗೆ ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡಲು ಲಿಖಿತವಾಗಿ ನೋಟಿಸು ನೀಡಿರುವ ನನಗೆ ಮಾಹಿತಿ ಇಲ್ಲ. ಆ ದಿನ ಚಾಸಾ **12** ರವರು ನಮ್ಮ ಕಛೇರಿಯಿಂದ ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವುದಕ್ಕೆ ಹೋಗವುದಕ್ಕಿಂತ ಮುಂಚಿತವಾಗಿ ನಮ್ಮ ಕಛೇರಿಯಲ್ಲಿ ಸಾರ್ವಜನಿಕರನ್ನು ಕರೆಸಿಕೊಂಡು ಅವರ ಸಮಕ್ಷಮ ಲಿಖಿತವಾಗಿ ಮಹಜರು ಕ್ರಮ ಜರುಗಿಸಿರುವುದಿಲ್ಲ. ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವ ಸಮಯದಲ್ಲಿ ಅಕ್ಕಪಕ್ಕದ ಗ್ರಾಮಸ್ಥರನ್ನು ಬರಮಾಡಿಕೊಂಡಿರುವುದಿಲ್ಲ. ಆ ದಿನ ಮಹಜರು ಸಮಯದಲ್ಲಿ ಛಾಯಾಗ್ರಹಣ ಮಾಡಿದ ಮೊಬೈಲಿನ ಸಂಗ್ರಹ ಸಾಮರ್ಥ್ಯ ಎಷ್ಟು ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಛಾಯಾಗ್ರಹಣ ಮಾಡುವ ಸಮಯದಲ್ಲಿ ಮೊಬೈಲಿನ ಸಂಗ್ರಹ ಸಾಮರ್ಥ್ಯ ಎಷ್ಟು

KACM030026812022

ಹಾಗೂ ನಂತರ ಮೊಬೈಲಿನ ಸಂಗ್ರಹ ಸಾಮರ್ಥ್ಯ ಎಷ್ಟು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಎಷ್ಟು ಸಮಯದವರೆಗೆ ಚಿತ್ರೀಕರಣ ಮಾಡಲಾಯಿತು ಎಂಬುದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿರುವ ಛಾಯಾಗ್ರಹಣವು ಎಷ್ಟು ಅವಧಿವರೆಗೆ ಮಾಡಲಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ನನಗೆ ಮೊಬೈಲಿನಿಂದ ಕಂಪ್ಯೂಟರಿಗೆ ಭಾವಚಿತ್ರಗಳನ್ನು ಮತ್ತು ವಿಡಿಯೋವನ್ನು ವರ್ಗಾಯಿಸಿಕೊಂಡು ಸಿ ಡಿ ಗೆ ತುಂಬಲು ತರಭೇತಿ ಆಗಿರುವುದಕ್ಕೆ ಸಂಬಂಧಿಸಿದಂತೆ ನಮ್ಮ ತನಿಖಾಧಿಕಾರಿಗೆ ನಾನು ಯಾವುದೇ ದಾಖಲೆ ನೀಡಿರುವುದಿಲ್ಲ. ಸದರಿ ಮಹಜರು ಕ್ರಮದ ಸಮಯದಲ್ಲಿ ಮಣ್ಣು ಮುಕ್ಕ ಹಾವಿನ ವಯಸ್ಸು ಮತ್ತು ಅದರ ಲಿಂಗವನ್ನು ನಾನು ತಿಳಿದುಕೊಂಡಿರುವುದಿಲ್ಲ ಮತ್ತು ಈ ಸಂಬಂಧ ನಮ್ಮ ತನಿಖಾಧಿಕಾರಿ ಸಹ ನನಗೆ ಹೇಳಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ,

**Sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಪ್ರ ದ ನ್ಯಾ ದಂ ., ಚಿಕ್ಕಮಗಳೂರು.

Visit **ecourts.gov.in** for updates or download mobile app "**eCourts Services**" from Android or iOS